



ಎಡದಿಂದ ಬಲಕ್ಕೆ:
1. ಸಂತರ ಜೊತೆಗೇ ಅವನ ವಾಸ ಒಂದು ವರ್ಷ (4)
3. ಧರೆಯ ಉದ್ಧಾರಕ್ಕೆ ಬೇಕೇ ಬೇಕು ಕಡಲು (3)
4. ಜೋರು ಮಾಡಿದ್ದೇಕೆಂದರೆ ಅಲ್ಲಿ ಹೆಜ್ಜೆ ನಿಲ್ಲುವುದೇ ಇಲ್ಲ (3)
6. ಹತ್ತಿಳಿದು ಮಾಡುವ ಅಭ್ಯಾಸಕ್ಕೆ ಬುನಾದಿ (4)
7. ಇತರರ ಲಕ್ಷ್ಯ ಸೆಳೆವ ಸಂಖ್ಯೆ ನೂರಾರು ಸಾವಿರ (4)
9. ರಣದಿಂದ ಬರುವ ವೇಳೆಗೆ ಎಂಥ ಸಾಲದ ಹೊರೆ! (4)
12. ಸಚ್ಚಾರಿತ್ರ್ಯದ ಲಕ್ಷಣ ಒಳ್ಳೆಯ ನಡವಳಿಕೆ
14. ಹಡಗಿನ ಪಯಣಕ್ಕೆ ಈ ಕೈ ಚೀಲ ಬೇಕೇ? (3)
15. ಬಾಬೂರಾಯನ ಅಕೃತ್ಯ ಎಷ್ಟು ಕ್ರೂರ (3)
16. ಏನೂ ತಿನ್ನಲು ಮಿಗಿಸಲಿಲ್ಲ, ಅತ್ಯಂತ ದೈತ್ಯ ಪ್ರಾಣಿ (4)

ಮೇಲಿಂದ ಕೆಳಕ್ಕೆ:
1. ಸಪ್ತಪದಿ ಜರುಗುವಾಗ ಜೇಡ–ಚೇಳಿನಂತಹ ಪ್ರಾಣಿ (4)
2. ಆ ರಾಜ್ಯಕ್ಕೆಲ್ಲ ಈಗ ಕೆಲಸ ವಿಲ್ಲದ ಸಮಯ (4)
3. ವಂಚನೆಗೆ ಒಳಗಾದ ನೋಡಿ ವಿಪರೀತ ಮಾತಿನವ (3)
5. ಆ ತರಕಾರಿ ತಿಂದರೆ ಸಾಕು, ಬರೀ ನವೆ (3)
6. ಕತ್ತರಿ ತರುವಾಗ ಜೊತೆಗೇ ಒಂದಷ್ಟು ಕಾಯಿಪಲ್ಲೆ (4)
8. ಮುತ್ತು–ಹವಳಗಳ ಆಗರವಾದ ಮಹಾಸಾಗರ (4)
10. ಹಣ್ಣಿನ ರಾಶಿ ಕದ್ದಿದ್ದೆಲ್ಲ ತಲೆ ಕೆಳಗು (3)
11. ರಂಪ ಮಾಡುತ್ತಿದ್ದಾತನ ಹೆಸರು 'ಲಕ್ಷ್ಮಿಯ ಗಂಡ' (4)
12. ಸಂಭ್ರಮ ಏನಿಲ್ಲ. ಅವರಿವರ ಶಕ್ತಿಯಲ್ಲಿ ಹೆಚ್ಚು– ಕಡಿಮೆ ಇಲ್ಲ (4)
13. ಚೆನಿವಾರನ ಮನೆಯಲ್ಲಿ ರಾಜನ ಬೀಸಣಿಗೆ (3)

## ಪದಬಂಧ 11–04–2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಭಿನಯ; 3. ಬದರಿ; 4. ಜತನ; 6. ಕೆಳೆತನ; 7. ಬಳಪ; 9. ಕಾನನ; 11. ದುರಂತ; 13. ಗಹನ; 15. ಬಿತ್ತರಿಸು; 17. ಕದಳಿ; 18. ಗುರಾಣಿ; 19. ಯಕ್ಷಗಣ.

ಮೇಲಿಂದ ಕೆಳಕ್ಕೆ:


1. ಅರಿಕೆ; 2. ಯಜನ; 3. ಬಹಳ; 5. ನಳಿನ; 7. ಬರಿದು; 8. ಪತಿತ; 9. ಕಾಳಿಂಗ; 10. ನವೀನ; 12. ರಂಜಕ; 14. ಹರಿಣಿ; 15. ಬಿಳಿಯ; 16. ಸುಗುಣ.

# ಪ್ರಶ್ನಾಂಕಣ

## ಕೆಂಪು ಸಮುದ್ರ – ಏನು ವಿಶೇಷ?

ಕೆಂಪು ಸಮುದ್ರ (ದಿ ರೆಡ್ ಸೀ)– ಅದು ಹಿಂದೂ ಮಹಾಸಾಗರದಲ್ಲಿನ ಒಂದು ಚಿಕ್ಕ ಸಮುದ್ರ. ಹಾಗಿದ್ದರೂ ಅದರ ಹಲವಾರು ವಿಶಿಷ್ಟ ಅದ್ಭುತ ಲಕ್ಷಣಗಳಿಂದಾಗಿ ಅದು ಸುಪ್ರಸಿದ್ಧ. ಈಶಾನ್ಯ ಆಫ್ರಿಕಾ ಮತ್ತು ಅರೇಬಿಯಾ ಪರ್ಯಾಯ ದ್ವೀಪಗಳ ನಡುವೆ 2250 ಕಿ.ಮೀ. ಉದ್ದಕ್ಕೆ, 307 ಕಿ.ಮೀ. ಅಗಲಕ್ಕೆ ಕಿರಿದಾಗಿ ಹಬ್ಬಿರುವ ಕೆಂಪು ಸಮುದ್ರ ಎಂಟು ರಾಷ್ಟ್ರಗಳಿಂದ– ಈಜಿಪ್ಟ್, ಸೂಡಾನ್, ಎರಿಟ್ರಿಯಾ, ಡಿಜ್‌ಬೌಟಿ, ಎಮೆನ್, ಸೌದಿ ಅರೇಬಿಯಾ, ಜೋರ್ಡಾನ್ ಮತ್ತು ಇಸ್ರೇಲ್– ಪರಿವರಿಸಲ್ಪಟ್ಟಿದೆ. ಹೀಗೆ ಸುತ್ತಲೂ ಪಸರಿಸಿದ ಅತಿ ಬಿಸಿಯ ಬರಡು ಮರುಭೂಮಿಯಲ್ಲಿ ಈ ಸಮುದ್ರದ ಸನಿಹದ ಕೆಂಬಣ್ಣದ ಮರಳಿನ ದಿಬ್ಬಗಳ ಪ್ರತಿಫಲನ ಪ್ರತಿ ಸಂಜೆ ಸೂರ್ಯಾಸ್ತದ ವೇಳೆಯಲ್ಲಿ ಇಡೀ ಸಮುದ್ರಕ್ಕೆ ರಕ್ತವರ್ಣ ಹಚ್ಚುತ್ತದೆ. ಜೊತೆಗೆ ಪ್ರತಿ ವರ್ಷದ ಕೆಲ ಅವಧಿಗಳಲ್ಲಿ ಇಲ್ಲಿನ ಜಲದಲ್ಲಿ ಹುಟ್ಟಿ ಹರಡಿ ನಿಲ್ಲುವ ಕೆಂಪು ಶೈವಲಗಳ ತೆಳ್ಳನ್ನ ಹಾಳೆ ಇಡೀ ಸಮುದ್ರಕ್ಕೆ ಕೆಂಬಣ್ಣ ಪೂಸುತ್ತದೆ. ಈ ಕಾರಣಗಳಿಂದಲೇ ಕೆಂಪು ಸಮುದ್ರಕ್ಕೆ ಈ ಹೆಸರು.

ಹಾಗೆಂದು ಕೆಂಪು ಬಣ್ಣವಷ್ಟೇ ಈ ಸಮುದ್ರದ ವಿಶೇಷ ಎಂದು ಭಾವಿಸಿ ಬಿಡಬೇಡಿ. ಕೇವಲ ಇಪ್ಪತ್ತೈದು ದಶಲಕ್ಷ ವರ್ಷ ವಯಸ್ಸಿನ– ಅತ್ಯಂತ ಕಡಿಮೆ ವಯಸಿನ– ಸಮುದ್ರ ಕೂಡ ಇದೇ. ಇತರ ಕಡಲುಗಳೊಡನೆ ಅತ್ಯಂತ ಕಡಿಮೆ ಸಂಪರ್ಕ ಹೊಂದಿರುವ ಸಮುದ್ರವೂ ಇದೇ: ಉತ್ತರದಲ್ಲಿ ಮೆಡಿಟರೇನಿಯನ್ ಸಮುದ್ರದೊಡನೆ ಮತ್ತು ದಕ್ಷಿಣದಲ್ಲಿ ಹಿಂದೂ ಮಹಾಸಾಗರದೊಡನೆ ಕಿರಿದಾದ ನಾಲೆಗಳ ಮೂಲಕವಷ್ಟೇ ಇದರ ಸಂಪರ್ಕ. ಹಾಗಾಗಿ ಕೆಂಪು ಸಮುದ್ರ ಸಾಗರ ಸಾಮ್ರಾಜ್ಯದಲ್ಲಿ ತುಂಬ ಏಕಾಂಗಿ. ಅಷ್ಟೇ ಅಲ್ಲದೆ ಕೆಂಪು ಸಮುದ್ರವನ್ನು ಒಂದೇ ಒಂದು ನದಿಯೂ ಸೇರುವುದಿಲ್ಲ; ಅಲ್ಲಿ ಬೀಳುವ ಮಳೆ ನೀರೂ ವಾರ್ಷಿಕ ಒಂದಂಗುಲಕ್ಕಿಂತ ಕಡಿಮೆ. ಒಟ್ಟಾರೆ ಈ ಸಮುದ್ರದ್ದು



ಸಂಪೂರ್ಣ ಒಂಟಿತನ. ಈ ಕಾರಣಗಳಿಂದ ಕೆಂಪು ಸಮುದ್ರದ ನೀರು ಗರಿಷ್ಠ ಲವಣಮಯ ಸಾಗರ ನೀರಿನ ಸರಾಸರಿ ಲವಣಾಂಶ ಶೇ. 3.5 ಆದರೆ ಕೆಂಪು ಸಮುದ್ರದಲ್ಲಿ ಶೇ. 4.1 ಕೆಂಪು ಸಮುದ್ರದ ನೀರಿನಷ್ಟು ತಾಪಮಾನದ ನೀರೂ ಸಾಗರವಾರದಲ್ಲಿ ಇನ್ನೆಲ್ಲೂ ಇಲ್ಲ.

ಯೋಗಾ ಯೋಗ ಏನೆಂದರೆ ಇಲ್ಲಿನ ನೀರಿನ ಅಧಿಕ ಉಷ್ಣತೆ ಮತ್ತು ಲವಣ ಸಾಂದ್ರತೆ ಹವಳದ ಜೀವಿಗಳಿಗೆ ಬಹಳ ಪ್ರಶಸ್ತ. ಕೆಂಪು ಸಮುದ್ರದಲ್ಲಿ 177 ಹವಳ ಪ್ರಭೇದಗಳು ನೆಲೆಸಿವೆ. ಅವು ನಿರ್ಮಿಸಿರುವ ಹವಳದ ದಿಬ್ಬಗಳಲ್ಲಿ (ಚಿತ್ರ ನೋಡಿ) ಪ್ರತಿ ಚದರ ಮೀಟರ್ ಪ್ರದೇಶದಲ್ಲೂ ಕನಿಷ್ಠ ಒಂದು ಸಾವಿರ ಇತರ ಜೀವಿ ಪ್ರಭೇದಗಳು ಆಶ್ರಯ ಪಡೆದಿವೆ. ವಿಸ್ಮಯ ಏನೆಂದರೆ ಕೆಂಪು ಸಮುದ್ರದಲ್ಲಿರುವ ಸಕಲ ಜೀವಿ ಪ್ರಭೇದಗಳ ಶತಾಂಶ ಮೂವತ್ತು ಭಾಗ ಇಡೀ ಧರೆಯಲ್ಲಿ ಇನ್ನೆಲ್ಲೂ ಇಲ್ಲ. ಇಂಥ ಅತಿ ನಿಬಿಢ ಅತೀವ ವೈವಿಧ್ಯಮಯ ಜೀವಾವಾರವಾಗಿರುವುದು ಕೆಂಪು ಸಮುದ್ರದ ಪರಮ ವಿಶೇಷ.

■ ಎನ್. ವಾಸುದೇವ್